# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 245 |
| ಮಾನ್ಯ ವಿಧಾನ ಪರಿಷತ್ ಸದಸ್ಯರು | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | ದಿನಾಂಕ: 15.02.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ರಾಜ್ಯದಲ್ಲಿ ಗಲಭೆ, ಗುಂಪು ಘರ್ಷಣೆ, ಪ್ರವಾಹ, ಕ್ಷಾಮ, ಕೈಗಾರಿಕೆ, ಭೂಕಂಪ ವಿನಾಶ ಮುಂತಾದವುಗಳಿಗೆ ತುತ್ತಾದವರಿಗೆ ಯಾವ ರೀತಿ ಕಾನೂನು ಸೇವೆಗಳನ್ನು ಒದಗಿಸಲಾಗುತ್ತಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು): | ಕಾನೂನು ಸೇವೆಗಳ ಅಧಿನಿಯಮ, 1987, ಕಲಂ.12 ರಡಿಯಲ್ಲಿ ಗುಂಪು ಘರ್ಷಣೆ, ಗಲಭೆ, ಪ್ರವಾಹ, ಕ್ಷಾಮ, ಭೂಕಂಪ ಕೈಗಾರಿಕಾ ವಿನಾಶ ಮುಂತಾದವುಗಳಿಗೆ ತುತ್ತಾದವರುಗಳಿಗೆ ಉಚಿತ ಕಾನೂನು ನೆರವು ನೀಡಲಾಗುತ್ತಿದೆ.<br>ನೊಂದ ವ್ಯಕ್ತಿಗಳು ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದಾಗ ಉಚಿತ ಕಾನೂನು ನೆರವು ನೀಡಲಾಗುವುದು. ವಕೀಲರ ಮೂಲಕ ಸಂಬಂಧಪಟ್ಟ ಇಲಾಖೆ, ನ್ಯಾಯಾಲಯ, ನ್ಯಾಯಾಧೀಕರಣದ ಮುಂದೆ ಅರ್ಜಿ ಸಲ್ಲಿಸಿ ಅವರಿಗೆ ಸಿಗಬೇಕಾದ ಸೌಲಭ್ಯದ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಸಂತ್ರಸ್ಥ ಪರಿಹಾರ ಯೋಜನೆಯಡಿಯಲ್ಲಿ ಅವರು ಸಂತ್ರಸ್ಥರಾಗಿದ್ದಲ್ಲಿ ಅವರಿಗೆ ಪರಿಹಾರವನ್ನು ಪ್ರಾಧಿಕಾರದ ವತಿಯಿಂದ ನೀಡಲಾಗುತ್ತಿದೆ. |
| (ಆ) | ಯಾವ ರೀತಿಯ ಕಾನೂನು ಸಾಕ್ಷರತಾ ಸೇವೆಗಳನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಒದಗಿಸಲಾಗುತ್ತಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು): | ಕಾನೂನು ಸೇವಾ ಪ್ರಾಧಿಕಾರವು ಜನಸಾಮಾನ್ಯರಲ್ಲಿ ಕಾನೂನಿನ ಬಗ್ಗೆ ಅರಿವು ಉಂಟು ಮಾಡುವುದು ಕಾನೂನು ಸೇವೆಗಳ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿದ್ದು, ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದ ದಿನಾಂಕದಿಂದ ಇಂದಿನ ತನಕ ಎಲ್ಲಾ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಮತ್ತು ಜಿಲ್ಲಾ ಪ್ರಾಧಿಕಾರಗಳ ಮೂಲಕ ಜನ ಸಾಮಾನ್ಯರಿಗೆ ಅಗತ್ಯವಿರುವ ಮೂಲಭೂತ ಕಾನೂನುಗಳ ಬಗ್ಗೆ ಸಂದರ್ಭಕ್ಕೆ ಅವಶ್ಯಕತೆ ಇರುವ ಕಾನೂನುಗಳ ಅರಿವನ್ನು ನ್ಯಾಯಾಧೀಶರು, ವಕೀಲರು ಮತ್ತು ವಿಷಯ ಪಾಂಡಿತ್ಯರ ಸಹಾಯದಿಂದ ತಾಲ್ಲೂಕು ಹಾಗೂ ಜಿಲ್ಲೆಯಲ್ಲಿ ಕಾನೂನು ಕಾರ್ಯಕ್ರಮಗಳನ್ನು ಆಯೋಜಿಸಿ ಕಾನೂನು ಸಾಕ್ಷರಥಾ ಸೇವೆಯನ್ನು ನೀಡಲಾಗುತ್ತಿದೆ. ( ಅನುಬಂಧ –ಅ ) |

...2

| | | |
|---|---|---|
| (ಇ) | ರಾಜ್ಯದಲ್ಲಿ ಮತೀಯ ಕಾರಣದಿಂದ ದೌರ್ಜನ್ಯಕ್ಕೆ ಬಲಿಯಾದವರ ಕುಟುಂಬಗಳಿಗೆ ಉಚಿತ ಕಾನೂನು ಸೇವೆಗಳನ್ನು ಒದಗಿಸಲಾಗಿದೆಯೇ: ಹೌದಾದಲ್ಲಿ, ಕಳೆದ ಮೂರು ವರ್ಷಗಳಿಂದ ಎಷ್ಟು ಪ್ರಕರಣಗಳಿಗೆ ಕಾನೂನು ಸೇವೆ ಒದಗಿಸಲಾಗಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು): | ಮತೀಯ ಕಾರಣಗಳಿಂದ ದೌರ್ಜನ್ಯಕ್ಕೆ ಬಲಿಯಾದ ಪ್ರಕರಣಗಳಲ್ಲಿ ಸಂತ್ರಸ್ಥರು ಕಾನೂನು ಸೇವೆ ಪಡೆಯಲು ಕಛೇರಿಯನ್ನು ಸಂಪರ್ಕಿಸಿರುವುದಿಲ್ಲ. ಅಂತಹ ಯಾವುದೇ ಪ್ರಕರಣಗಳು ಪ್ರಾಧಿಕಾರಕ್ಕೆ ಬಂದಿರುವುದಿಲ್ಲ. |
| (ಈ) | ಕಾನೂನು ಸೇವಾ ಪ್ರಾಧಿಕಾರದ ಅಧಿನಿಯಮ 1987ರ ಅಧ್ಯಾಯ 12ರ ಪ್ರಕಾರ ಉಚಿತ ಕಾನೂನು ಸೇವೆಯನ್ನು ಪಡೆಯುವ ವ್ಯಕ್ತಿಗಳಲ್ಲಿ ಹಿರಿಯ ನಾಗರೀಕರಿಗೆ ಸೌಲಭ್ಯ ಸಿಗದಿರುವುದರಿಂದ ಹಾಗೂ ಇತ್ತೀಚಿನ ದಿನಗಳಲ್ಲಿ ಹಿರಿಯ ನಾಗರೀಕರಿಗೆ ಉಚಿತ ಕಾನೂನು ಸೇವೆಯು ಅತ್ಯವಶ್ಯವಾಗಿರುವ ಕಾರಣ ಹಿರಿಯ ನಾಗರೀಕರಿಗೂ ಉಚಿತ ಕಾನೂನು ಸೌಲಭ್ಯ ಒದಗಿಸುವ ಕುರಿತು ಸರ್ಕಾರದ ನಿಲುವೇನು? | ಕಾನೂನು ಸೇವೆಗಳ ಅಧಿನಿಯಮ, 1987ರ ಕಲಂ 12 ರಡಿಯಲ್ಲಿ ಹಿರಿಯ ನಾಗರೀಕರು ಉಚಿತ ಕಾನೂನು ಸೇವೆಯನ್ನು ಪಡೆಯಲು ಅರ್ಹರಿರುವುದಿಲ್ಲ. ಆದರೆ, ಹಿರಿಯ ನಾಗರೀಕರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಲ್ಲಿ, ಮಹಿಳೆಯಾಗಿದ್ದಲ್ಲಿ ಹಾಗೂ ವಿಶೇಷ ಚೇತನರಾಗಿದ್ದಲ್ಲಿ ಅಥವಾ ವಾರ್ಷಿಕ ಆದಾಯ ರೂ.3.00 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿದ್ದಲ್ಲಿ ಹಿರಿಯ ನಾಗರೀಕರಿಗೆ ಉಚಿತ ಕಾನೂನು ಸೇವೆಯನ್ನು ಒದಗಿಸಲಾಗುತ್ತಿದೆ. |

**ಸಂಖ್ಯೆ: ಲಾ-ಎಲ್‌ಎಡಿ/41/2024**

**(ಎಚ್. ಕೆ. ಪಾಟೀಲ)**
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

ಎಚ್.ಕೆ ಪಾಟೀಲ
ಕಾನೂನು, ನ್ಯಾಯ, ಮಾನವ ಹಕ್ಕುಗಳು
ಸಂಸದೀಯ ವ್ಯವಹಾರಗಳು, ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

ಅನುಬಂಧ - ಆ

Generated from eOffice by FIRDOUS H. LAW-AD2-ASS(FH), ASSISTANT, LAW SEC on 12/02/2024 12:17 PM

**ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು**
**ಕಾನೂನು ಸಾಕ್ಷರತಾ ವಿಭಾಗ**
**ಅನುಬಂಧ:**

| | |
|---|---|
| ಪ್ರಶ್ನೆ | ಯಾವ ರೀತಿಯ ಕಾನೂಣು ಸಾಕ್ಷರತಾ ಸೇವೆಗಳನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಒದಗಿಸಲಾಗುತ್ತಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು) |
| ಉತ್ತರ | ಕಾನೂನು ವಿದ್ಯಾ ಪ್ರಸಾರದ ಮೂಲಕ ಜನರಲ್ಲಿ ಕಾನೂನಿನ ಬಗ್ಗೆ ಅರಿವನ್ನುಂಟು ಮಾಡಿ ಆ ಮೂಲಕ ಅವರು ಕಾನೂನು ತಮಗೆ ಕೊಡಮಾಡಿದ ಹಕ್ಕುಗಳನ್ನು ಪಡೆದುಕೊಳ್ಳುವಂತೆ ಮಾಡುವುದು.<br>ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕ್ರಿಯಾ ಯೋಜನೆಯಲ್ಲಿ ತಿಳಿಸಿರುವ ಕಾರ್ಯಕ್ರಮಗಳನ್ನು ರಾಜ್ಯ ಪ್ರಾಧಿಕಾರವು ಜಿಲ್ಲಾ ಪ್ರಾಧಿಕಾರ ಮತ್ತು ತಾಲ್ಲೂಕು ಸಮಿತಿಗಳ ಮೂಲಕ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈ ದಿಸೆಯಲ್ಲಿ ವಿವಿಧ ವಿಷಯಗಳಿಗೆ ಅಂದರೆ ಮಹಿಳೆ ಮತ್ತು ಕಾನೂನು, ಮಹಿಳೆಯರ ಆಸ್ತಿ ಹಕ್ಕು, ಜನನ ಮತ್ತು ಮರಣ ನೋಂದಣಿ ಕಾಯ್ದೆ, ಮೋಟಾರು ವಾಹನ ಕಾಯ್ದೆ, ಬಾಲ್ಯ ವಿವಾಹ ನಿಷೇದ ಕಾಯ್ದೆ, ಹಿಂದೂ ವಾರಸ ಕಾಯ್ದೆ, ಮಹಿಳಾ ದೌರ್ಜನ್ಯ ತಡೆ ಕಾಯ್ದೆ, ಶಿಕ್ಷಣದ ಹಕ್ಕು ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಪಟ್ಟಂತೆ ಕಾನೂನು ಸಾಕ್ಷರತಾ ಕಾರ್ಯಕ್ರಮ / ಕಾನೂನು ಕಾರ್ಯಾಗಾರಗಳನ್ನು ಜಿಲ್ಲಾ ಪ್ರಾಧಿಕಾರ ಮತ್ತು ತಾಲ್ಲೂಕು ಸಮಿತಿಗಳ ಮೂಲಕ ನಡೆಸಲಾಗಿರುತ್ತದೆ.<br>ಈ ಕಾರ್ಯಕ್ರಮಗಳಲ್ಲದೇ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದವರು ಸೂಚಿಸಿರುವ ವಿಶೇಷ ದಿನಾಚರಣೆಗಳನ್ನು ಸಹ ಹಮ್ಮಿಕೊಳ್ಳಲಾಗಿರುತ್ತದೆ. |

| | | | |
|---|---|---|---|
| 12ನೇ ಜನವರಿ | ರಾಷ್ಟ್ರೀಯ ಯುವ ದಿನಾಚರಣೆ | 21ನೇ ಜೂನ್ | ವಿಶ್ವ ಯೋಗ ದಿನಾಚರಣೆ |
| 25ನೇ ಜನವರಿ | ಮತದಾನದ ದಿನಾಚರಣೆ | 30ನೇ ಜುಲೈ | ಮಾನವ ಕಳ್ಳಸಾಗಾಣೆ ದಿನಾಚರಣೆ |
| 30ನೇ ಜನವರಿ | ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ | 1ನೇ ಸೆಪ್ಟೆಂಬರ್ | ರಾಷ್ಟ್ರೀಯ ಪೌಷ್ಠಿಕಾಂಶದ ಸಪ್ತಾಹ |
| 9ನೇ ಫೆಬ್ರವರಿ | ಜೀತ ಪದ್ಧತಿ ನಿರ್ಮೂಲನ ದಿನಾಚರಣೆ | 1ನೇ ಅಕ್ಟೋಬರ್ | ಹಿರಿಯ ನಾಗರೀಕರ ದಿನಾಚರಣೆ |
| 20ನೇ ಫೆಬ್ರವರಿ | ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ | 10ನೇ ಅಕ್ಟೋಬರ್ | ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ |

Generated from eOffice by FIRDOUS H, LAW-AD2-ASS(FH), ASSISTANT, LAW SEC on 12/02/2024 12:17 PM





| | | | |
|---|---|---|---|
| 8ನೇ ಮಾರ್ಚ್ | ವಿಶ್ವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. | 11ನೇ ಅಕ್ಟೋಬರ್ | ಅಂತರರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ |
| 15ನೇ ಮಾರ್ಚ್ | ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ | 9ನೇ ನವೆಂಬರ್ | ಕಾನೂನು ಸೇವೆಗಳ ದಿನಾಚರಣೆ |
| 22ನೇ ಮಾರ್ಚ್ | ವಿಶ್ವ ಜಲ ದಿನಾಚರಣೆ | 14ನೇ ನವೆಂಬರ್ | ಮಕ್ಕಳ ಹಕ್ಕುಗಳ ದಿನಾಚರಣೆ |
| 22ನೇ ಏಪ್ರಿಲ್ | ಭೂಮಿ ದಿನಾಚರಣೆ | 25ನೇ ನವೆಂಬರ್ | ಅಂತರಾಷ್ಟ್ರೀಯ ಮಹಿಳೆರ ಮೇಲಿನ ದೌರ್ಜನ್ಯ ದಿನಾಚರಣೆ |
| 1ನೇ ಮೇ | ಕಾರ್ಮಿಕ ದಿನಾಚರಣೆ | 26ನೇ ನವೆಂಬರ್ | ಸಂವಿಧಾನದ ದಿನಾಚರಣೆ |
| 31ನೇ ಮೇ | ವಿಶ್ವ ತಂಬಾಕು ವಿರೋಧಿ ದಿನಾಚರಣೆ | 1ನೇ ಡಿಸೆಂಬರ್ | ವಿಶ್ವ ಏಡ್ಸ್/ಹೆಚ್.ಐ.ವಿ ದಿನಾಚರಣೆ |
| 5ನೇ ಜೂನ್ | ವಿಶ್ವ ಪರಿಸರ ದಿನಾಚರಣೆ | 3ನೇ ಡಿಸೆಂಬರ್ | ವಿಶ್ವ ಅಂಗವಿಕಲರ ದಿನಾಚರಣೆ |
| 12ನೇ ಜೂನ್ | ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ | 10ನೇ ಡಿಸೆಂಬರ್ | ಮಾನವ ಹಕ್ಕುಗಳ ದಿನಾಚರಣೆ |

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕು ಸೇವಾ ಸಮಿತಿ ವತಿಯಿಂದ ವಿವಿಧ ಇಲಾಖೆ ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಳೆದ ಮೂರು ವರ್ಷಗಳಲ್ಲಿ ಹಮ್ಮಿಕೊಂಡ ಕಾನೂನು ಅರಿವು ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.

| ಕ್ರಸಂ | ವರ್ಷ | ಒಟ್ಟು ಹಮ್ಮಿಕೊಂಡ ಕಾರ್ಯಕ್ರಮಗಳು | ಭಾಗವಹಿಸಿವರ ಸಂಖ್ಯೆ |
|---|---|---|---|
| 1 | 2021 (ಜನವರಿ–ಡಿಸಂಬರ್) | 53,455 | 1,21,81,476 |
| 2 | 2022 (ಜನವರಿ–ಡಿಸಂಬರ್) | 25350 | 50,12,850 |
| 3 | 2023 (ಜನವರಿ–ಡಿಸಂಬರ್) | 61,781 | 53,59,594 |